ಕರ್ನಾಟಕ ಭೂ–ಸುಧಾರಣಾ ಕಾಯ್ದೆ

156(2624); ಶ್ರೀ ವಾಸು (ಚಾಮರಾಜ)

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೈಸೂರು ತಾಲ್ಲೂಕಿನಲ್ಲಿ ಕ್ರಯದ ಮೂಲಕ ವರ್ಗಾವಣೆಗೊಂಡ ಆಸ್ತಿಗಳು ಕರ್ನಾಟಕ ಭೂ ಸುಧಾರಣಾ ಕಾಯ್ದೆಯ ಕಲಂ–79 "ಎ" ಮತ್ತು "ಬಿ" ಅನ್ವಯ ಅಂದರೆ ಕೃಷಿಕ ಸಮುದಾಯಕ್ಕೆ ಸೇರಿದವರ ನಡುವೆ ಮಾತ್ರ ಆಗಿದೆಯೇ; ಹಾಗಿದ್ದಲ್ಲಿ, ಅವುಗಳ ಒಟ್ಟು ವಿಸ್ತೀರ್ಣವೆಷ್ಟು;

ಆ) ಸದರಿ ಅವಧಿಯಲ್ಲಿ ಭೂ–ಸುಧಾರಣಾ ಕಾಯ್ದೆಯ ಕಲಂ–79 "ಎ" ಮತ್ತು "ಬಿ" ಉಲ್ಲಂಘನೆಗಾಗಿ ನಮೂದಾದ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳ ಪೈಕಿ ಇತ್ಯರ್ಥವಾಗಿರುವ ಮತ್ತು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು? (ವಿವರ ನೀಡುವುದು);

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರ ಪರವಾಗಿ)

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೈಸೂರು ತಾಲ್ಲೂಕಿನಲ್ಲಿ ಕ್ರಯದ ಮೂಲ ವರ್ಗಾವಣೆಗೊಂಡ ಆಸ್ತಿಗಳು ಕರ್ನಾಟಕ ಭೂ ಸುಧಾರಣಾ ಕಾಯ್ದೆಯ ಕಲಂ–79 "ಎ" ಮತ್ತು "ಬಿ" ಅನ್ವಯ ಅಂದರೆ ಕೃಷಿಕ ಸಮುದಾಯಕ್ಕೆ ಖಾತೆ ಆಗಿರುವ ಒಟ್ಟು ವಿಸ್ತೀರ್ಣ 344–19 ಎಕರೆ.

ವರ್ಷವಾರು ವಿವರ:

1. 2011–12 = 105–04 ಎಕರೆ
2. 2012–13 = 155–02 ಎಕರೆ
3. 2013–14 = 84–13 ಎಕರೆ

ಒಟ್ಟು = **344–19 ಎಕೆರೆ**

ಆ) ಸದರಿ ಅವಧಿಯಲ್ಲಿ ಭೂ ಸುಧಾರಣೆ ಕಾಯ್ದೆಯ ಕಲಂ 79–ಎ ಮತ್ತು ಬಿ ಉಲ್ಲಂಘನೆ ನಮೂದಾದ ಪ್ರಕರಣಗಳು ಒಟ್ಟು 719

ಸಾಲು	ನಮೂದಾದ ಪ್ರಕರಣಗಳು	ಇತ್ಯರ್ಥವಾದ ··ಪ್ರಕರಣಗಳು	ಬಾಕಿ ಇರುವ ಪ್ರಕರಣಗಳು
2011–12	289	164	125
2012–13	314	267	47
2013–14	116	14	102
ಒಟ್ಟು	719	445	274

ಶ್ರೀ ವಾಸು:– ಸದರಿ ಅವಧಿಯಲ್ಲಿ ಭೂ ಸುಧಾರಣಾ ಕಾಯ್ದೆಯ ಕಲಂ–79 (ಎ) ಮತ್ತು (ಬಿ) ಉಲ್ಲಂಘನೆಗಾಗಿ ನಮೂದಾದ ಪ್ರಕರಣಗಳ ಸಂಖ್ಯೆ ಎಷ್ಟು? ಅವುಗಳ ಪೈಕಿ ಇತ್ಯರ್ಥವಾಗಿರುವ ಮತ್ತು ಬಾಕಿಯಿರುವ ಪ್ರಕರಣಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದೆ. 2011–12 ರಲ್ಲಿ 125 ಪ್ರಕರಣಗಳು ಬಾಕಿ ಇವೆ, 2013–14 ರಲ್ಲಿ 102 ಬಾಕಿ ಇರುವ ಪ್ರಕರಣಗಳಿವೆ ಎಂದು ಹೇಳಲಾಗಿದೆ. ಯಾವ ಅವಧಿಯೊಳಗೆ ಇದು ಇತ್ಯರ್ಥವಾಗಬಹುದೆಂಬ ಪ್ರಶ್ನೆಯನ್ನು ನಾನು ಮಾನ್ಯ ಮಂತ್ರಿಗಳಿಗೆ ಕೇಳಬಯಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ (ಕೃಷಿ ರಾಜ್ಯ ಸಚಿವರು) (ಕಂದಾಯ ಸಚಿವರ ಪರವಾಗಿ):– ಮಾನ್ಯ ಅಧ್ಯಕ್ಷರೆ, ತಮಗೆ ತಿಳಿದಂತೆ ಇದು quasi judicial ಪ್ರಕ್ರಿಯೆ ಹಾಗೂ appellants ಸಹ ಇದಕ್ಕೆ ಬೇಕಾದಂಥ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ದಾಖಲೆಗಳನ್ನು ಅವರೂ ಕೊಡಬೇಕಾಗುತ್ತದೆ. Quasi judicial proceeding ಆಗಿರುವುದರಿಂದ ಸ್ಪಷ್ಟವಾಗಿ ಇಂಥ ತಾರೀಖು ಎಂದು ಹೇಳುವುದು ಸೂಕ್ತವಲ್ಲ. ಏಕೆಂದರೆ, ತಮಗೂ ಗೊತ್ತಿರುವ ಹಾಗೆ quasi judicial process ಆಗಿದೆ. ಆದರೂ.. ಸಹ ತಮ್ಮ ವಿಚಾರವನ್ನು ಅರ್ಥ ಮಾಡಿಕೊಂಡು ಈ ಪ್ರಕರಣಗಳನ್ನು ಆದಷ್ಟು ಬೇಗ ಇತ್ಯರ್ಥ ಮಾಡುವುದಕ್ಕೆ ಸರ್ಕಾರದಿಂದ ನಾವು ಪ್ರಯತ್ನ ಪಡುತ್ತೇವೆ. ಸರ್ಕಾರದಲ್ಲಿ ಆದಷ್ಟು ಬೇಗ ಅವರು ತಾರೀಖುಗಳನ್ನು ಹಾಕಿಕೊಳ್ಳಬಹುದು. ಆದರೆ, ಅದಕ್ಕೆ ಬೇಕಾದಂಥ

ಮಾಹಿತಿಯನ್ನು ಫಿರ್ಯಾದುದಾರರು ಒದಗಿಸಲಿಲ್ಲವೆಂದರೆ ಇತ್ಯರ್ಥ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಸರ್ಕಾರದ ಕಡೆಯಿಂದ ತಡವಾಗದ ರೀತಿಯಲ್ಲಿ ಅವರಿಗೆ ಸೂಚನೆಯನ್ನು ಸರ್ಕಾರದ ಪರವಾಗಿ ಕೊಡುತ್ತೇವೆ.

ಶ್ರೀ ವಾಸು:– ಈ ರೀತಿಯ ಪ್ರಕರಣಗಳನ್ನೇನಾದರೂ System ಗೆ upload ಮಾಡಿ ಸಾರ್ವಜನಿಕರಿಗೆ ಈ System ನಿಂದ ಮಾಹಿತಿ ದೊರೆಯುವಂಥ ವ್ಯವಸ್ಥೆ ಏನಾದರೂ ಮಾಡುವ ಚಿಂತನೆ ಸರ್ಕಾರಕ್ಕೆ ಇದೆಯೇ ಎಂದು ಕೇಳಬಯಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ:– ತಾವು ಕೊಟ್ಟಿರುವಂಥ ಸಲಹೆಯನ್ನು ಖಂಡಿತವಾಗಿ ಪರಿಶೀಲಿಸುತ್ತೇವೆ. ಬೇರೆ ಕೆಲವು ಪ್ರಕರಣಗಳಲ್ಲಿ ಇತ್ಯರ್ಥ ಮಾಡುವುದಕ್ಕೆ ಅದಾಲತ್ ಪ್ರಕ್ರಿಯೆಯನ್ನು ಆರಂಭ ಮಾಡಿದ್ದೇವೆ. ಉಪವಿಭಾಗಾಧಿಕಾರಿಗಳು ಹಳ್ಳಿಗೆ ಹೋಗಿ ಪ್ರಕರಣಗಳನ್ನು ಇತ್ಯರ್ಥ ಪಡಿಸುವಂಥ ಕೆಲಸ ಪ್ರಾಯೋಗಿಕವಾಗಿ ಚಾಲನೆಯಾಗಿದೆ. ಕೆಲವು ಪ್ರಕರಣಗಳನ್ನು ನಾವು ಇತ್ಯರ್ಥ ಮಾಡಬಹುದು. ಆದರೆ 79(ಎ), (ಬಿ), 136 ಇಂಥವುಗಳನ್ನು ನಾವು ಅದಾಲತ್ ರೀತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಆದರೂ ಬೇಗ ಮಾಡುವುದಕ್ಕೆ ಹೇಳುತ್ತೇವೆ. ತಾವು ಹೇಳಿದ ಪ್ರಕಾರ ಸಾರ್ವಜನಿಕರಿಗೆ ಮಾಹಿತಿ ಸಿಗುವಂತೆ ಮಾಡುವುದಕ್ಕೆ ಆಗುತ್ತದೆಯೇ ಎನ್ನುವ ವಿಚಾರವನ್ನು ಪರಿಗಣಿಸುತ್ತೇವೆ.

ಶ್ರೀ ವಾಸು:– 79(ಬಿ)ಯಲ್ಲಿ ಆದಾಯದ ಮಿತಿಯನ್ನು 2 ಲಕ್ಷದಿಂದ ಏನಾದರೂ ಹೆಚ್ಚಿಗೆ ಮಾಡುವಂಥ ಚಿಂತನೆ ಸರ್ಕಾರಕ್ಕೆ ಇದೆಯೇ ಎನ್ನುವುದನ್ನು ಕೇಳಬಯಸುತ್ತೇನೆ.

ಶ್ರೀ ಕೃಷ್ಣ ಬೈರೇಗೌಡ:– ನಿಮ್ಮ ಪ್ರಶ್ನೆ ನೇರವಾದಂಥ ಪ್ರಶ್ನೆ ಇದೆ. ಅದರ ಪ್ರಸ್ತಾಪಕ್ಕೆ ಬಂದಾಗ ಉತ್ತರ ಕೊಡುತ್ತೇನೆ.